DOC- 316
T.P-2

①

51st Year of Publication ★ SATYAVADI Daily, MYSORE 4

Reg No B G 155 ಶ್ರೀ 10-6-1968

ಸತ್ಯವಾದಿ

[illegible] ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸ್ಥಾಪಕರು : [illegible] ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

A Straight Deal
If you want a Straight Deal
Then go Straight to
Bank Road Babusar.
The Shop with one Price,
a Fair Price, and a really
favourable price.
No worry No Higgle-haggling.

ಮೈಸೂರಿಗೆ ಹೆಚ್ಚು ಅಕ್ಕಿ ಕೋಟಾಕ್ಕೆ ತಿರಸ್ಕಾರ

ಮೈಸೂರು ಆಪೇರಾ ಟಾಕೀಸ್ ಬಳಿ ಹಾಕಿರುವ ತಮ್ಮ ಸ್ವಂತ ಭವ್ಯ
ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರಹನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಮಯವಾದ ಇಂದ್ರಜಾಲಾಟ ನಡೆಯುವ [illegible] ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಕ್ಷಿಪ್ರದಲ್ಲೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವ ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ದಿ || ರಾಬರ್ಟ್ ಕೆನಡಿ

ವಾಷಿಂಗ್ಟನ್— ಸೆನೇಟರ್ ಕೆನಡಿಯವರನ್ನು ಆರ್ಲಿಂಗ್ಟನ್ ರಾಷ್ಟ್ರೀಯ ಸ್ಮಶಾನದಲ್ಲಿ ಅವರ ಸಹೋದರ ಅಧ್ಯಕ್ಷ ಕೆನಡಿಯವರ ಸಮಾಧಿ ಹತ್ತಿರ ಹೂಳಲಾಯಿತು – ಅಲ್ಲಿ 147000 ಗೌರವಾನ್ವಿತ ಯುದ್ಧದ ಮತ್ತು ಪೌರ ವ್ಯಕ್ತಿಗಳು ಹೂಳಲ್ಪಟ್ಟಿರುವರು.

ಮುಖ್ಯ ಮಂತ್ರಿಗಳು

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರವರು ನಾಳೆ (ಮಂಗಳವಾರ) ಮದರಾಸಿಗೆ ಹೋಗಿ, ಮುಖ್ಯ ಮಂತ್ರಿಗಳ ಮತ್ತು ಪಂಚಾಯಿತಿರಾಜ್ಯ ಮಂತ್ರಿಗಳ ಸಭೆಯಲ್ಲಿ ಭಾಗವಹಿಸಿ, ಬುಧವಾರ ವಾಪಸ್ಸಾಗುವರು.

★

ಡಿಫೆನ್ಸ್ ಲಾಯರ್

ಲಾಸ್ ಏಂಜಲ್ಸ್— ರಾಬರ್ಟ್ ಕೆನಡಿಯವರ ಕೊಲೆಪಾತಕನೆಂದು ಹೇಳಲಾದ ಸಿರ್ಹಾ ಬಿಷಾರ್ ಸಿರ್ಹಾ ತನಗೆ ಡಿಫೆನ್ಸ್ ಲಾಯರನ್ನು ಒದಗಿಸಲು ಅಮೇರಿಕಾ ಸಿವಿಲ್ ಲಿಬರ್ಟೀಸ್ ಯೂನಿಯನ್ನನ್ನು ಕೇಳಿರುವನು.

★

ಉದ್ಘಾಟನೆ

ಮಂಡ್ಯ— ಇಲ್ಲಿ ಜಪಾನು ಅಕ್ಕೀ ಗಿರಣಿಯನ್ನು ಭಾರತ ಆಹಾರ ಮಂತ್ರಿ ಜಗಜೀವನ ರಾಂ ನಿನ್ನೆ ಉದ್ಘಾಟಿಸಿದರು.

★

ಪೋಲೀಸರ ಸಾವು ನೋವು

ಅಹಮದಾಬಾದು — ಧೊಂಡ್‌ನಿಂದ ಅಹಮೆದ್‌ನಗರಕ್ಕೆ ಹೋಗುತ್ತಿದ್ದ 36 ಮಂದಿ ರಿಜರ್ವ್ ಪೋಲಿಸರಿದ್ದ ಬಸ್ಸು ಆಕಸ್ಮಿಕಕ್ಕೆ ತುತ್ತಾಗಿ 5 ಮಂದಿ ಸತ್ತು ಇಬ್ಬರು ಗಾಯಗೊಂಡರು.

ನಿರ್ಬಂಧ ತೆಗೆಯುವದಿಲ್ಲ

ಬೆಂಗಳೂರು— ಈ ವರ್ಷ ಅಂತರ ರಾಜ್ಯಗಳಲ್ಲಿ ಅಕ್ಕಿ ಮತ್ತು ಗೋಧಿ ಓಡಾಟದ ನಿರ್ಬಂಧನನ್ನು ತೆಗೆಯಲು ಸಾಧ್ಯವಿಲ್ಲವೆಂದು ಭಾರತ ಆಹಾರ ಮಂತ್ರಿ ಶ್ರೀ ಜಗಜೀವನ್ ರಾಂ ಹೇಳಿದರು.

★

ಚಳವಳಿಕ್ಕೆ ಸೇರಲು ಆಹ್ವಾನ

ತ್ರಿವೇಂಡ್ರಂ— "ನಮ್ಮ ಸ್ವಾತಂತ್ರ್ಯ" ಮತ್ತು ಹೆಚ್ಚು ಅಕ್ಕಿ ಮತ್ತು ಸರಿಯಾದ ಸರಬರಾಜಿಗಾಗಿ ಕೇಂದ್ರದ ವಿರುದ್ಧ ಚಳವಳಿಯಲ್ಲಿ ಸೇರಲು ಕಮ್ಯೂನಿಸ್ಟ್ ಪಾರ್ಟಿ (ಮಾರ್ಕ್ಸಿಸ್ಟ್) ರಾಜ್ಯ ಸಮಿತಿ ಇತರ ಎಲ್ಲಾ ಪಾರ್ಟಿಗಳಿಗೂ ಕರೆಯಿತ್ತಿದೆ.

●

ಪ್ರಾಣಿಸಂಗ್ರಹಾಲಯಕ್ಕೆ

ಮೈಸೂರು — ಪಶ್ಚಿಮ ಆಫ್ರಿಕಾದ ಒಂದು ಜೋಡಿ ಚೀಟಾಗಳನ್ನು ಜೂಗೆ ಸೇರಿಸಲಾಯಿತು – ಪಶ್ಚಿಮ ಜರ್ಮನಿ ಪ್ರಾಣಿ ಸಂಗ್ರಹಾಲಯದಿಂದ ಇವು ತರಲ್ಪಟ್ಟವು.

★

ಗೋಲೀಬಾರು ಮತ್ತು ಲಾಠಿ ಏಟು

ಔರಂಗಾಬಾದು— ಒಬ್ಬ ರೊಟ್ಟೀ ಅಂಡಿ ಮಾಲೀಕನು ಒಂದು ಹಸುವನ್ನು ಇರಿದನೆಂಬ ಅಪಾದನೆಯಿಂದ ಹುಟ್ಟಿದ ಗಲಭೆಯಿಂದ ಅಶಾಂತಿಗೊಂಡಿದ್ದ ಊರು ನಿನ್ನೆ ತಹಬಂದಿಗೆ ಬಂದಿರುವದಾಗಿ ವರದಿಯಾಗಿದೆ – ಗುಂಪುಗಳನ್ನು ಚದುರಿಸಲು ಪೋಲೀಸರು 5–6 ಕಡೆ ಗೋಳಿಬಾರು ಮತ್ತು ಲಾಠಿ ಚಾರ್ಜು ಮಾಡಿದರು – ಇಬ್ಬರು ಸತ್ತು 19 ಮಂದಿ ಗಾಯಗೊಂಡರು.

★

. ಉಡುಪಿ – ಕೈಗಾರಿಕೆ ಮತ್ತು ವ್ಯಾಪಾರ ಸಂಸ್ಥೆಗಳ ಮೇಲೆ ಲೈಸೆನ್ಸು ಫೀ ಹೆಚ್ಚಿಸಿರುವದನ್ನು ಬಹಿರಂಗ ಸಭೆಯಲ್ಲಿ ಟೀಕಿಸಲಾಯಿತು.

ಹೆಚ್ಚು ಅಕ್ಕಿಗೆ ತಿರಸ್ಕಾರ

ಬೆಂಗಳೂರು— ಆಹಾರ ಮಂತ್ರಿ ಶ್ರೀ ವಿಠಲದಾಸ್ ಶೆಟ್ಟರು ಭಾರತ ಆಹಾರ ಮಂತ್ರಿ ಶ್ರೀ ಜಗಜೀವನರಾಂರನ್ನು ರಾಜ್ಯದ ಆವಶ್ಯಕತೆಗಾಗಿ ಕೂಡಲೇ 2000 ಹೆಚ್ಚು ನಿಗತಿಮಾಡಬೇಕೆಂದು ಕೇಳಿದರು – ರಾಜ್ಯಕ್ಕೆ ಹೆಚ್ಚು ಅಕ್ಕಿ ಕೋಟಾ ಬಗ್ಗೆ ವಾಗ್ದಾನ ಮಾಡಲು ಸಾಧ್ಯವಿಲ್ಲವೆಂದೂ ಗೋಧಿಯಾಗಿದ್ದರೆ ಕೊಡಬಹುದಾಗಿತ್ತೆಂದೂ ಉತ್ತರ ಬಂತು.

★

ನಾಗಾಗಳ ಹಾವಳಿ

ಕೊಹಿಮಾ— ಇಲ್ಲಿಗೆ ಹತ್ತಿರದ ಜೆಟ್ಸೋಮಾ ಗ್ರಾಮದ ದಟ್ಟ ಅರಣ್ಯದಲ್ಲಿ ಶುಕ್ರವಾರ ನಾಗಾ ದೌರ್ಜನ್ಯರಿಗೂ ರಕ್ಷಣಾ ಪಡೆಯವರಿಗೂ ಆದ ಘರ್ಷಣೆಯಲ್ಲಿ ನೂರು ಮಂದಿ ನಾಗಾಗಳು ಹತರಾದರು ಮತ್ತು ಅನೇಕರು ಗಾಯಗೊಂಡರು — ರಕ್ಷಣಾ ಪಡೆಯಲ್ಲಿ 50 ಸಾವುನೋವುಗಳಾದವು.

★

ಶ್ರೀ ಸುಬ್ರಹ್ಮಣ್ಯ ಸ್ವಾಮಿ ಉತ್ಸವ

ಮಧುರೈ— ಇಲ್ಲಿಗೆ 5 ಮೈಲಿ ದೂರದ ತಿರುಪ್ಪರಂಕುನ್ರಂನಲ್ಲಿ ನಿನ್ನೆ ಶ್ರೀ ಸುಬ್ರಹ್ಮಣ್ಯಸ್ವಾಮಿಯ ಉತ್ಸವಕ್ಕೆ ಬರುತ್ತಿದ್ದ ಅಗಾಧ ಸಂಖ್ಯೆಯಲ್ಲಿ ಭಕ್ತರು ಬಂದಿದ್ದರು – ರೈಲುಗಳಲ್ಲಿ ಸ್ಥಳಸಿಕ್ಕದೆ 2 ಸಾವಿರ ಮಂದಿ ರೈಲನ್ನು ಅಡ್ಡಕಟ್ಟಿ ಗಾಡಿಗಳ ಮೇಲೆ ಹತ್ತಿದ್ದರು : ಕೆಲವರು ರೈಲಿಗೆ ಕಲ್ಲು ಬೀರುತ್ತಿದ್ದರು – ಮಧುರೈನಿಂದ ಸಶಸ್ತ್ರ ಪೋಲೀಸರು ಬಂದು ಗುಂಪನ್ನು ಚದುರಿಸಿದರು.

★

ಕೊಯಿನ ಅಣೆಕಟ್ಟು

ಬಿರುಕು ಬಿಟ್ಟಿರುವ ಕೊಯಿನಾ ಅಣೆಕಟ್ಟಿನ ಅಪಾಯಕ್ಕೆ ಹೆದರಿ ಹುನಗುಂಡ್ ತಾಲ್ಲೋಕು ಕೃಷ್ಣಾ ನದಿ ದಡದ ಗ್ರಾಮಸ್ಥರು ಅಲ್ಲಿಂದ ಹೊರಟುಹೋಗುತ್ತಿರುವರೆಂದು ಹೇಳಲಾಗುತ್ತಿದೆ.

ತುಳಸೀದಾಸ್ ಮತ್ತು ದೈವ ಪೀಡಿತ ಕೊಲೆಪಾತಕ

ಒಂದಾನೊಂದು ಕಾಲದಲ್ಲಿ ಒಬ್ಬ ಮನುಷ್ಯನು ಒಬ್ಬ ಬ್ರಾಹ್ಮಣನನ್ನು ಉದ್ದೇಶಪೂರ್ವಕವಾಗಿ ಕೊಂದಿದ್ದನು. ತನ್ನ ಈ ಘೋರಕೃತ್ಯಕ್ಕೆ ಶಿಕ್ಷೆಯಿಂದ ಪಾರಾದನಾದರೂ, ದೈವನ್ಯಾಯವು ಅವನನ್ನು ಹಿಮ್ಮೆಟ್ಟುತ್ತಿದ್ದು, ಭೀಕರ ಆಕಾರವು ತನ್ನನ್ನು ಹಗಲೂ ರಾತ್ರಿ ಅಟ್ಟಿಕೊಂಡು ಬರುತ್ತಿದ್ದುದನ್ನು ಕಾಣುತ್ತಿದ್ದನು.

ಪ್ರತಿ ನಿಮಿಷವೂ ಭೀತಿಯಿಂದ ಜೀವಿಸುತ್ತಿದ್ದು, ಅವನ ಭೀಕರ ಪಾಪವೂ ಅವನ ಜ್ಞಾಪಕಕ್ಕೆ ಬರುತ್ತಿತ್ತು. ಅವನಿಗೆ ಮನಶ್ಶಾಂತಿ ಇರಲಿಲ್ಲ. ಎಷ್ಟೇ ಪ್ರಯತ್ನಿಸಿದರೂ ಭಯಂಕರ ಆಕಾರವನ್ನು ಮರೆಯಲು ಸಾಧ್ಯವಾಗಲಿಲ್ಲ. ಈ ಹಿಂಸೆಯನ್ನು ತಡೆಯಲಾರದೆ, ತನ್ನ ಸಹಿಸಲಾರದ ಪಾಪ ಪರಿಹಾರಕ್ಕಾಗಿ ಪವಿತ್ರ ನಗರವಾದ ಕಾಶಿಗೆ ಹೋದನು. ಅಲ್ಲಿ ಕಂಡಕಂಡ ವಿದ್ವಾಂಸರ ಮತ್ತು ಪವಿತ್ರ ಮನುಷ್ಯರ ಕಾಲಿಗೆ ಬೀಳುತ್ತಾ, ತನ್ನ ಅಪರಾಧ ವಿವರಿಸುತ್ತಿದ್ದನು. ಅವರೆಲ್ಲರೂ ಬ್ರಹ್ಮಹತ್ಯ ಹತ್ಯ ಪಾಪ ಪರಿಹಾರಕ್ಕೆ ಪ್ರಾಯಶ್ಚಿತ್ತವಿಲ್ಲ, ಎಂದು ಹೇಳುತ್ತಿದ್ದರು.

ನಿರಾಶೆಗೊಂಡ ಈ ಕೊಲೆ ಪಾತಕನು ಪವಿತ್ರ ಗಂಗಾ ಜಲದಲ್ಲಿ ಬಿದ್ದು ಜೀವ ಕಳೆದುಕೊಳ್ಳಲು ನಿರ್ಧರಿಸಿದನು. ಅವನು ಹಾಗೆ ಮಾಡಲಿದ್ದ ಸಮಯದಲ್ಲಿ ತುಳಸಿದಾಸನು ಕಂಡನು. ಅವನ ಬಗ್ಗೆ ಪಶ್ಚಾತ್ತಾಪಗೊಂಡು, ಹಾಗೆ ಮಾಡಲು ಕಾರಣವೇನೆಂಬುವನ್ನು ವಿಚಾರಿಸಿದನು. ಆ ಮನುಷ್ಯನು ತನ್ನ ದುರವಸ್ಥೆಯನ್ನೂ ತನ ನಿರ್ಧಾರವನ್ನೂ ತಿಳಿಸಿದನು.

' ಈ ಭೀಕರ ಪಾಪದಿಂದ ನೀನು ಪೂರ್ತಿ ಬಿಡುಗಡೆಯಾಗುವ ಮಾರ್ಗವನ್ನು ನಾನು ಸೂಚಿಸುತ್ತೇನೆ " ಎಂದು ತುಳಸೀದಾಸನು ಹೇಳಿ, ' ನಿನ್ನ ಶಕ್ತಿ ಮೀರಿ ಅನುತಾಪ ಪಡು ; ಶ್ರೀ ರಾಮಚಂದ್ರದ ಕ್ಷಮಾಪಣೆ ಬೇಡು : ಸದಾ ಶ್ರೀ ರಾಮನ ಪವಿತ್ರ ನಾಮದ ಉಚ್ಚರಣೆ ಮಾಡು " ಎಂದು ತಿಳಿಸಿದನು.

SHAKTI SUDHA

✻

A Superb Tonic



ಗೋರಕ್ಷಣೆ ಮತ್ತು ಪಾಲನೆಯ ಕಾರ್ಯಗಳು ಹೆಚ್ಚು ಹೆಚ್ಚಾಗಿ ನಡೆಯಲಿ

✻ Protect the Cow ✻

ವುಡ್‌ಲಾಂಡ್ಸ್ ಜನಪ್ರಿಯ 6ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ ✻ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್‌ಹುಸೇನ್
ಅಚ್ಚಲ ಸಚದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಆಪೆರ— 7–6–68 ರಿಂದ

.... ಅತ್ಯಮೋಘ ತಮಿಳು ಚಿತ್ರ ....

✻ ಪಾಲ್ ಮಣಂ ✻

ತಾರಾಗಣ— ಜಯಶಂಕರ್, ಅಶೋಕನ್, ತಾಯ್ ನಾಗೇಶ್,
ಕೆ ಆರ್ ವಿಜಯ, ಮನೋರಮ, ಮಣಿಮಾಲ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರ ಧರ್ಮಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the ' Satyavadi ' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

Edited, Printed & Published by Dharmaprachara Nirata
M S Krishna Rao (Proprietor) at the Satyavadi Press
Chamarajapuram, Mysore 4